# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ | 744 |
| ಸದಸ್ಯರ ಹೆಸರು | ಶ್ರೀ ಆರ್. ಬಿ. ತಿಮ್ಮಾಪುರ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 17-12-2018 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಬಾಗಲಕೋಟೆ ಜಿಲ್ಲೆ ಮತ್ತು ಮುಧೋಳ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ರೈತರಿಗೆ ಬೆಳೆ ಪರಿಹಾರ ಮಂಜೂರು ಮಾಡಲಾಗಿದೆ; ಹಾಗೂ ಎಷ್ಟು ರೈತರಿಗೆ ಯಂತ್ರೋಪಕರಣಗಳು ಮತ್ತು ಬೀಜ ರಸಗೊಬ್ಬರಗಳನ್ನು ಒದಗಿಸಲಾಗಿದೆ; ಎಷ್ಟು ರೈತರ ಜಮೀನುಗಳಲ್ಲಿ ಕೃಷಿ ಹೊಂಡ ನಿರ್ಮಿಸಲಾಗಿದೆ? (ರೈತರ ಪಟ್ಟಿ ಮತ್ತು ಜಾತಿ ಪ್ರಮಾಣ ಪತ್ರದೊಂದಿಗೆ ಮಾಹಿತಿ ನೀಡುವುದು) | <u>ಕೃಷಿ ಇಲಾಖೆ:</u><br>ಬಾಗಲಕೋಟೆ ಜಿಲ್ಲೆ ಮತ್ತು ಮುಧೋಳ ತಾಲ್ಲೂಕಿನ ಎಲ್ಲಾ ವಿವರಗಳನ್ನು ಸಿ.ಡಿ ರೂಪದಲ್ಲಿ ನೀಡಲಾಗಿದೆ.<br><br><u>ಜಲಾನಯನ ಅಭಿವೃದ್ಧಿ ಇಲಾಖೆ:</u><br>ಜಲಾನಯನ ಯೋಜನೆಯಡಿ ಜಲಾನಯನ ವ್ಯಾಪ್ತಿಯ ಪ್ರದೇಶದಲ್ಲಿ ಬರುವ ಎಲ್ಲಾ ರೈತವರ್ಗಗಳ ಜಮೀನುಗಳಲ್ಲಿ ಅವರ ಬೇಡಿಕೆಯಂತೆ ಮತ್ತು ಸ್ಥಳ ಸೂಕ್ತತೆ ಅನ್ವಯ ವಿವಿಧ ಚಟುವಟಿಕೆಗಳಾದ ಮಣ್ಣು ಮತ್ತು ನೀರು ಸಂರಕ್ಷಣಾ ಕಾಮಗಾರಿಗಳಾದ ಕ್ಷೇತ್ರಬದುಗಳು, ಕಂದಕಬದು, ಬೋಲ್ಡರ್/ರಬಲ್/ಸಸ್ಯ ತಡೆ, ತಡೆಅಣೆಗಳು. ನಾಲಾಬದುಗಳು, ಖುಷ್ಕಿ ತೋಟಗಾರಿಕೆ, ಕೃಷಿ ಅರಣ್ಯ ಮತ್ತು ಭೂ ಅಭಿವೃದ್ಧಿ ಮುಂತಾದ ಉಪಚಾರ ಕಾರ್ಯಕ್ರಮಗಳನ್ನು ವೈಜ್ಞಾನಿಕವಾಗಿ ಅನುಷ್ಠಾನ ಮಾಡುವುದರ ಜೊತೆಗೆ ಕೃಷಿಹೊಂಡ ನಿರ್ಮಾಣ ಚಟುವಟಿಕೆಯೂ ಒಂದಾಗಿರುತ್ತದೆ.<br><br>ಬಾಗಲಕೋಟೆ ಜಿಲ್ಲೆಯಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಮೂರು ವರ್ಷಗಳಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆಯಡಿ ಮಾತ್ರ ಕೃಷಿಹೊಂಡವನ್ನು ನಿರ್ಮಿಸಲಾಗಿದ್ದು, ಈ ಯೋಜನೆಯು ಪ್ರದೇಶಾಭಿವೃದ್ಧಿ ಯೋಜನೆಯಾಗಿದ್ದು, ಫಲಾನುಭವಿ ಆಧಾರಿತ ಯೋಜನೆಯಾಗಿಲ್ಲದ ಕಾರಣ ಫಲಾನುಭವಿಗಳ ಜಾತಿ ಪ್ರಮಾಣ ಪತ್ರವನ್ನು ಪಡೆಯಲಾಗುತ್ತಿಲ್ಲ.<br><br>ಕಳೆದ ಮೂರು ವರ್ಷಗಳಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ 2017-18ನೇ ಸಾಲಿನಲ್ಲಿ ಜಮಖಂಡಿ ತಾಲ್ಲೂಕಿನಲ್ಲಿ ಮಾತ್ರ 2 ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ. ವರ್ಷವಾರು ವಿವರ ಕೆಳಕಂಡಂತಿದೆ; |

| ವರ್ಷ | ನಿರ್ಮಿಸಲಾದ ಕೃಷಿಹೊಂಡಗಳ ಸಂಖ್ಯೆ | ಫಲಾನುಭವಿಗಳ ಹೆಸರು | ವರ್ಗ (ಜಾತಿ) |
|---|---|---|---|
| 2015-16 | 0 | - | - |
| 2016-17 | 0 | - | - |
| 2017-18 | 2 | 1.ದುರ್ಗಪ್ಪ ಮಾಲಿಂಗಪ್ಪ ಚಂಬಾರ<br>2.ಶರಣ ರಾಣಪ್ಪ ತಳಗೇರಿ | ಪರಿಶಿಷ್ಟ ಜಾತಿ<br>ಪರಿಶಿಷ್ಟ ಜಾತಿ |
| ಒಟ್ಟು | **2** | | |

ಕಂದಾಯ ಇಲಾಖೆ:

ಬಾಗಲಕೋಟೆ ಜಿಲ್ಲೆ ಮತ್ತು ಮುಧೋಳ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಲ್ಲಿ ಪಾವತಿಸಿದ ಪರಿಹಾರದ ಮೊತ್ತದ ವಿವರ ಈ ಕೆಳಕಂಡಂತಿರುತ್ತದೆ.

ಸನ್ 2017-18ನೇ ಸಾಲಿಗೆ ಬರ ಮತ್ತು ಪ್ರವಾಹ ಪರಿಸ್ಥಿತಿ ಉಂಟಾಗದೆ ಇರುವುದರಿಂದ ಪರಿಹಾರ ಪಾವತಿಸಿರುವುದಿಲ್ಲ.

| ವರ್ಷ | ರೈತರ ಸಂಖ್ಯೆ | ಬೆಳೆ ಪರಿಹಾರ ಪಾವತಿಸಿದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| **2017-18** | | |
| ಮುಂಗಾರು | - | - |
| ಹಿಂಗಾರು | - | - |
| **2018-19** | | |
| ಮುಂಗಾರು | 73 | 4.84 |
| ಹಿಂಗಾರು | 3400 | 352.42 |
| **2019-20** | | |
| ಮುಂಗಾರು (ಪ್ರವಾಹ) | 7651 | 2040.56 |

ಸಂಖ್ಯೆ: AGD/157/ACT/2018

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು